# ವಿರಾಟ ದರ್ಶನ



ದರ್ಶನ್‌ರ ಹೊಸತೊಂದು ಚಿತ್ರ ಸೆಟ್ಟೇರಿದೆ. 'ವರ ಮಹಾಲಕ್ಷ್ಮಿ ಹಬ್ಬ'ದಂದು ಮುಹೂರ್ತ ನಡೆಸಿರುವ ಈ ಚಿತ್ರದ ಹೆಸರು 'ವಿರಾಟ್'. ಹೆಸರಿಗೆ ತಕ್ಕಂತೆ ದರ್ಶನ್ ಪ್ರತಿಭೆಯ ವಿರಾಟ ದರ್ಶನ ಈ ಚಿತ್ರದ ಮೂಲಕ ಆಗಲಿದೆಯಂತೆ. ಈ ಚಿತ್ರಕ್ಕಾಗಿಯೇ ದರ್ಶನ್ ತೂಕ ಇಳಿಸಿಕೊಂಡು ಸಪೂರವಾಗಿದ್ದು, ವಿಶೇಷ ಫೋಟೊ ಸೆಷನ್ ಕೂಡ ನಡೆಸಿಕೊಟ್ಟಿದ್ದಾರೆ. ಚಿತ್ರತಂಡದ ಪ್ರಕಾರ, ಈ ಚಿತ್ರ ಅಭಿಮಾನಿಗಳ ಪಾಲಿಗೆ ಹಬ್ಬ!

ಹೆಚ್.ವಾಸು 'ವಿರಾಟ್' ಚಿತ್ರದ ನಿರ್ದೇಶಕರು. ಇದವರ ನಿರ್ದೇಶನದ ಇಪ್ಪತ್ತೊಂದನೇ ಸಿನಿಮಾ. ಅಂದಹಾಗೆ, 'ವಿರಾಟ್' ರೀಮೇಕ್ ಚಿತ್ರವಲ್ಲ! 'ನಾನು ರೀಮೇಕ್ ಮಾಡುವುದಿಲ್ಲ' ಎನ್ನುವುದು ವಾಸು ಸ್ಪಷ್ಟನೆ. (ಚಿತ್ರಕ್ಕೆ ಕಥೆ ಬರೆದಿರುವ ಎಂ.ಎಸ್.ರಮೇಶ್, ಚಿತ್ರಕಥೆ ರಚನೆಯಲ್ಲೂ ನಿರ್ದೇಶಕರಿಗೆ ನೆರವಾಗಿದ್ದಾರೆ). ಈ ಮೊದಲು 'ಭಗವಾನ್', 'ಲಾಲಿ ಹಾಡು', 'ಇಂದ್ರ' ಚಿತ್ರಗಳಲ್ಲಿ ವಾಸು–ದರ್ಶನ್ ಜೋಡಿ ಕೆಲಸ ಮಾಡಿದೆ. 'ಇಂದ್ರ' ಚಿತ್ರದಲ್ಲಂತೂ ಇಬ್ಬರ ಕೆಮಿಸ್ಟ್ರಿ ಅದ್ಭುತವಾಗಿ ಕೆಲಸ ಮಾಡಿದ್ದು, ಸಿನಿಮಾ ದೊಡ್ಡ ಯಶಸ್ಸು ಗಳಿಸಿತ್ತು. ಈ ಚಿತ್ರ ಕೂಡ 'ವಿರಾಟ ಪ್ರದರ್ಶನ' ಕಾಣಲಿದೆ ಎನ್ನುವುದು ಗಾಂಧೀನಗರದ ನಿರೀಕ್ಷೆ.




# ಪ್ರೇಮ್ ಪರೀಕ್ಷೆ

ಅಂತೂ ಇಂತೂ 'ಜೋಗಯ್ಯ' ಬಿಡುಗಡೆಗೆ ಮುಹೂರ್ತ ಗೊತ್ತಾಗಿದೆ. 'ವರ ಮಹಾಲಕ್ಷ್ಮಿ ಹಬ್ಬ'ದಂದೇ ತೆರೆ ಕಾಣಬೇಕಿದ್ದ 'ಜೋಗಯ್ಯ' ಒಂದು ವಾರ ತಡವಾಗಿ, ಆಗಸ್ಟ್ 19ರಂದು ತೆರೆಕಾಣುತ್ತಿದೆ. ಸಣ್ಣಪುಟ್ಟ ಕತ್ತರಿ ಪ್ರಯೋಗದ ನಂತರ ಸೆನ್ಸಾರ್ ಮಂಡಳಿ, ಚಿತ್ರಕ್ಕೆ 'ಯು/ಎ' ಪ್ರಮಾಣಪತ್ರ ನೀಡಿದೆ.

ಶಿವರಾಜ್‌ಕುಮಾರ್ ನೂರನೇ ಚಿತ್ರ, ಥ್ರೀಡಿ ಹಾಡು, ಥ್ರೀಡಿ ಫೈಟು ಎಂದು ನಾನಾ ಕಾರಣಗಳಿಂದಾಗಿ ವಿಳಂಬವಾಗಿದ್ದರೂ ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ ಎನ್ನುವುದು ನಿರ್ದೇಶಕ ಪ್ರೇಮ್ ಅನಿಸಿಕೆ. ಈ ಚಿತ್ರದ ಮೂಲಕ ನಿರ್ಮಾಪಕರೂ ಆಗುತ್ತಿರುವ ಅವರಿಗೆ 'ಜೋಗಯ್ಯ' ಅಸ್ತಿತ್ವದ ಪ್ರಶ್ನೆಯೂ ಆಗಿದೆ. ಆ ಕಾರಣದಿಂದಲೇ ಚಿತ್ರದ ಪ್ರಚಾರಕ್ಕೆ ಅವರು ಇನ್ನಿಲ್ಲದ ಮುತುವರ್ಜಿ ವಹಿಸಿದ್ದಾರೆ. ವಾರಕ್ಕೆ ಮೊದಲೇ 'ಅಡ್ವಾನ್ಸ್ ಬುಕ್ಕಿಂಗ್' ಆರಂಭಿಸಿರುವ 'ಪ್ರೇಮ ಬಳಗ', ಇನ್ನೂರೈವತ್ತಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಸಿನಿಮಾ ತೆರೆಕಾಣಿಸುವ ಮೂಲಕ ಆದಷ್ಟು ಬೇಗನೆ ತಮ್ಮ ಬಂಡವಾಳ ವಾಪಸ್ ಪಡೆಯುವ ಪ್ರಯತ್ನದಲ್ಲಿದೆ.

ಪ್ರೇಮ್‌ಗೆ ಮಾತ್ರವಲ್ಲ, ಶಿವರಾಜ್‌ಗೆ ಕೂಡ 'ಜೋಗಯ್ಯ' ಅಗ್ನಿಪರೀಕ್ಷೆಯೇ. ಸಾಲುಸಾಲು ಸೋಲುಗಳ ನಂತರ 'ಮೈಲಾರಿ'ಯ ಸಹನೀಯ ಯಶಸ್ಸು ಕಂಡಿರುವ ಅವರಿಗೆ, ತಮ್ಮ ನೂರನೇ ಚಿತ್ರದ ಮೂಲಕ ದೊಡ್ಡ ಯಶಸ್ಸು ಕಾಣುವ ಹಂಬಲ. ಈ ಸಿನಿಮಾ ಗೆದ್ದರೆ 'ಜೋಗಯ್ಯ' ನಂತರದ ಚಿತ್ರಗಳ ನಿರ್ಮಾಪಕರು ಕೂಡ ನೆಮ್ಮದಿಯಿಂದ ಉಸಿರಾಡುವುದು ಸಾಧ್ಯವಿದೆ.

# ತೆಳ್ಳಗಾದ ಭಾಮೆ!



ತಮಿಳಿನ 'ಮೈನಾ'ದ ಕನ್ನಡ ಅವತರಣಿಕೆ 'ಶೈಲೂ' ಚಿತ್ರದಲ್ಲಿ ಗಣೇಶ್‌ಗೆ ನಾಯಕಿಯಾಗಿ ನಟಿಸುತ್ತಿರುವ ಮಲಯಾಳಿ ಚೆಲುವೆ ಭಾಮಾ ತೂಕ ಇಳಿಸಿಕೊಂಡಿದ್ದಾರಂತೆ. ಪಾತ್ರದ ಅಗತ್ಯಕ್ಕಾಗಿ ಸುಮಾರು ಹದಿನೈದು ಕಿಲೋ ತೂಕ ಇಳಿಸಿಕೊಂಡಿರುವ ಅವರು, ಈಗ ಸರಳರೇಖೆಯ ಹಿಂದೆಯೂ ಅಡಗಬಲ್ಲಂಥ ಸುಂದರಿ.

ಭಾಮಾಗೆ 'ಮೈನಾ' ಕನ್ನಡದಲ್ಲಿ ಮೂರನೇ ಸಿನಿಮಾ. 'ಮೊದಲಾ ಸಲಾ' ಅವರ ಚೊಚ್ಚಲ ಸಿನಿಮಾ. ಭಾಮೆಯ ಎರಡನೇ ಸಿನಿಮಾ 'ಒಂದು ಕ್ಷಣದಲ್ಲಿ' ತೆರೆಕಾಣಬೇಕಿದೆ. ಕನ್ನಡದಲ್ಲಿ ಹೆಚ್ಚು ಹೆಚ್ಚು ಆಫರ್‌ಗಳು ಬರುತ್ತಿರುವುದರಿಂದ ಕನ್ನಡವೂ ಪದೇಪದೇ ಭಾಮಾ ಕಿವಿಗೆ ಬೀಳುತ್ತಿದೆ. 'ನೋಡುತ್ತಿರಿ, ಇನ್ನು ಸ್ವಲ್ಪ ದಿನಗಳಲ್ಲೇ ಕನ್ನಡ ಕಲಿಯುವೆ' ಎಂದು ಬೆದರಿಕೆ ಒಡ್ಡುತ್ತಿರುವ ಈ ಹೆಣ್ಣುಮಗಳು ಗಾಂಧಿನಗರದಲ್ಲೇ ಠಿಕಾಣಿ ಹೂಡುವ ಉದ್ದೇಶ ಹೊಂದಿರುವಂತಿದೆ.

■ ರಘು